**Kannada Prabha**

**Date:** 19-03-2021 **Page No:** 2

**Edition:** Mysore **Language:** Kannada

# ಎಸ್‌ಡಿಎಂ ಐಎಂಡಿ, ಸಿಐಐನಿಂದ ಕನ್ವರ್ಜೆನ್ಸ್ -3ಐ

## ಕೋವಿಡ್ 19ರಿಂದ ಆಧುನಿಕ ಕಾರ್ಯಕ್ಷೇತ್ರದ ಸಂಸ್ಕೃತಿಯ ಬದಲಾವಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಡಿಎಂ-ಐಎಂಡಿ-ಸಿಐಐ ಜಂಟಿಯಾಗಿ ಕನ್ವರ್ಜೆನ್ಸ್ - 3 ಐ, ವಾರ್ಷಿಕ ಇಂಡಸ್ಟ್ರಿ ಅಕಾಡೆಮಿಯ ಇಂಟರ್ಫೇಸ್ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ಫೀಡ್ಬ್ಯಾಕ್ ಇನ್ಸೈಟ್ಸ್‌ನ ಸಿಇಒ ಎಸ್. ಚಂದ್ರಮೌಳಿ ಮಾತನಾಡಿ, ಆಧುನಿಕ ಕಾರ್ಯಕ್ಷೇತ್ರದ ಸಂಸ್ಕೃತಿಯನ್ನು ಕೋವಿಡ್ 19 ಬದಲಾಯಿಸಿದೆ. ಸಾಂಪ್ರದಾಯಿಕ ಹಾಗೂ ಆಧುನಿಕ ಸಂಸ್ಕೃತಿಗಳನ್ನು ಹೋಲಿಸಿದಾಗ, ಕ್ರಮವಾಗಿ ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಅಧಿಕೃತದಿಂದ ಸಹಕಾರಿ ಸಂವಹನ; ಕಟ್ಟುನಿಟ್ಟಾದ ನಿಯಮದಿಂದ ಗ್ರಾಹಕೀಕರಣಗೊಂಡ ನಿಯಮಗಳು, ಜಡತ್ವದಿಂದ ಗುರಿ ಆಧಾರಿತ ಕಾರ್ಯ ವ್ಯವಸ್ಥೆ; ಆಜೀವ ಉದ್ಯೋಗದಿಂದ ಆಜೀವ ಉದ್ಯೋಗದಾತತೆ ಮತ್ತು ಆಯ್ಕೆ ಮಾಡಿದ ಕ್ಷೇತ್ರದಿಂದ ಆಸಕ್ತಿ ಇರುವ ಕ್ಷೇತ್ರದ ಕಡೆಗೆ ಚಲನೆ ಇತ್ಯಾದಿ ಕೆಲಸಕ್ಕೆ ಸಂಬಂಧಿಸಿದ ಹೊಸ ಮಾದರಿಗಳಿಂದಾಗಿ ಈ ಬದಲಾವಣೆಗಳು ಆಗುತ್ತಿವೆ ಎಂದು ತಿಳಿಸಿದರು.

ಕೋವಿಡ್ ನಂತರದ ಸಮಯದಲ್ಲಿ ಉದ್ಯೋಗಾಕಾಂಕ್ಷಿಗಳಿಂದ ಉದ್ಯೋಗದಾತರ ನಿರೀಕ್ಷೆಗಳು' ವಿಷಯ ಕುರಿತ ಸಂವಾದ ನಡೆಯಿತು. ಸದಸ್ಯರಾದ ಎಸ್. ಚಂದ್ರಮೌಳಿ, ಪಿಜಿಡಿಎಂ ವಿದ್ಯಾರ್ಥಿಗಳಾದ ಕ್ಷಿತಿಜ್ ಮಾಥುರ್ ಮತ್ತು ಡಿ. ಜ್ಯೋತ್ಸ್ನಾ ಅವರು ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಎಸ್‌ಡಿಎಂ ಐಎಂಡಿ ಸಂಸ್ಥೆಯ ನಿರ್ದೇಶಕ ಡಾ.ಎನ್. ಆರ್. ಪರಶುರಾಮನ್ ಮಾತನಾಡಿ, ಆಧುನಿಕ ಕಾರ್ಯಕ್ಷೇತ್ರದ ಸಂಸ್ಕೃತಿಯಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಮಾತನಾಡಿದರು. ಎಸ್‌ಡಿಎಂ ಐಎಂಡಿ ಕಾಯತಂತ್ರದ ಡಾ.ಪ್ರಸಾದ್ ಸ್ವಾಗತಿಸಿದರು. ಪ್ರೊ.ಎಸ್. ಕಣ್ಣದಾಸ್ ವಂದಿಸಿದರು.